# ಕತಾರ್‌ನ ದೊರೆಯ ಜೊತೆ ಪ್ರಧಾನಮಂತ್ರಿ ಭೇಟಿ

15 ಫೆಬ್ರುವರಿ, 2024

ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರು ಇಂದು ದೋಹಾದಲ್ಲಿ ಅಮೀರಿ ಪ್ಯಾಲೇಸ್‌ನಲ್ಲಿ ಕತಾರ್‌ನ ದೊರೆ ಮಾನ್ಯ ಶೇಖ್ ತಮೀನ್ ಬಿನ್ ಹಮದ್ ಅಲ್ ಥಾನಿ ಅವರನ್ನು ಭೇಟಿ ಮಾಡಿದರು.

2. ಪ್ರಧಾನಿ ಅವರು ಆಗಮಿಸುತ್ತಿದ್ದಂತೆ ಅಮೀರಿ ಪ್ಯಾಲೇಸ್‌ನಲ್ಲಿ ಅದ್ದೂರಿ ಸ್ವಾಗತ ಕೋರಲಾಯಿತು. ಬಳಿಕ, ಉಭಯ ದೇಶಗಳ ನಿಯೋಗ ಮಟ್ಟದ ಮಾತುಕತೆ ಮತ್ತು ನಿರ್ಬಂಧಿತ ಮಾತುಕತೆಗಳು ನಡೆದವು. ಆರ್ಥಿಕ ಸಹಕಾರ, ಹೂಡಿಕೆಗಳು, ಇಂಧನ ಪಾಲುದಾರಿಕೆ, ಬಾಹ್ಯಾಕಾಶ ಸಹಯೋಗ, ನಗರ ಮೂಲಸೌಕರ್ಯ, ಸಾಂಸ್ಕೃತಿಕ ಬಂಧಗಳು ಮತ್ತು ಜನರ ನಡುವಿನ ಸಂಬಂಧಗಳ ಕುರಿತು ಮಾತುಕತೆ ವೇಳೆ ಚರ್ಚೆಯಾದವು. ಉಭಯ ನಾಯಕರು ಪ್ರಾದೇಶಿಕ ಮತ್ತು ಜಾಗತಿಕ ಸಮಸ್ಯೆಗಳ ಕುರಿತೂ ತಮ್ಮ ನಿಲುವನ್ನು ಹಂಚಿಕೊಂಡರು.

3.ಕತಾರ್‌ನಲ್ಲಿರುವ 8 ಲಕ್ಷಕ್ಕೂ ಮಿಕ್ಕಿದ ಭಾರತೀಯ ಸಮುದಾಯದ ಹಿತ ಕಾಪಾಡುತ್ತಿರುವುದಕ್ಕಾಗಿ ದೊರೆಗೆ ಪ್ರಧಾನಿ ಧನ್ಯವಾದ ಸಲ್ಲಿಸಿದರು ಹಾಗೂ ಕತಾರ್‌ನೊಂದಿಗೆ ದ್ವಿಪಕ್ಷೀಯ ಸಹಕಾರವನ್ನು ಇನ್ನಷ್ಟು ವಿಸ್ತರಿಸುವ ಹಾಗೂ ಗಾಢವಾಗಿಸುವತ್ತ ಭಾರತ ಬದ್ಧವಾಗಿದೆ ಎಂದೂ ಹೇಳಿದರು. ಭಾರತಕ್ಕೆ ಭೇಟಿ ನೀಡುವಂತೆಯೂ ಇದೇ ವೇಳೆ ಪ್ರಧಾನಿ ಅವರು ದೊರೆಗೆ ಆಹ್ವಾನ ನೀಡಿದರು.

4. ಪ್ರಧಾನಿಯವರ ಆಶಯವನ್ನು ಪುನರುಚ್ಚರಿಸಿದ ದೊರೆ, ಗಲ್ಫ್ ಭಾಗದಲ್ಲಿನ ಮೌಲ್ಯಯುತ ಪಾಲುದಾರನಾಗಿರುವ ಭಾರತದ ಪಾತ್ರವನ್ನು ಪ್ರಶಂಸಿಸಿದರು. ಕತಾರ್‌ನ ಅಭಿವೃದ್ಧಿಯಲ್ಲಿ ಸ್ಪಂದನಶೀಲ ಭಾರತೀಯ ಸಮುದಾಯದ ಪಾತ್ರವಿದೆ ಜತೆಗೆ ಕತಾರ್‌ನಲ್ಲಿ ನಡೆದ ವಿವಿಧ ಅಂತಾರಾಷ್ಟ್ರೀಯ ಕಾರ್ಯಕ್ರಮಗಳಲ್ಲಿನ ಅವರ ಉತ್ಸಾಹದಾಯಕ ಪಾಲ್ಗೊಳ್ಳುವಿಕೆಯೂ ಇದೆ ಎಂದು ಕೊಂಡಾಡಿದರು.

5. ಈ ಭೇಟಿಯ ಬಳಿಕ ಪ್ರಧಾನಮಂತ್ರಿಯವರಿಗೆ ಗೌರವಾರ್ಥವಾಗಿ ಅಮೀರಿ ಪ್ಯಾಲೇಸ್‌ನಲ್ಲಿ ಬ್ಯಾಂಕ್ವೆಟ್ ಲಂಚ್ ಅನ್ನು ಆಯೋಜಿಸಲಾಗಿತ್ತು.

**ದೋಹಾ**
**15 ಫೆಬ್ರುವರಿ 2024**